ಅಕೌಂಟ್‌ಗೆ ಇವತ್ತು ಐದು ಕೋಟಿ ಹಣ ಹಾಕಿದ್ದಾರೆ, ಅದು ಯಾರ ಅಕೌಂಟ್‌ನಿಂದ ಅಂತಾ ಕೇಳಿ ತಿಳಿದುಕೋ...'

'ಅಂದರೆ ನಿಮ್ಮ ಅನುಮಾನದ ಪ್ರಕಾರ ನಾನು ರಾಕೇಶ್‌ಗೆ ಹಣ ಕೊಟ್ಟು ನನ್ನ ಪತಿ ಕೊಲೆ ಮಾಡಿಸಿ, ಈ ನಾಟಕ ಆಡು ಅಂತಾ ಹೇಳಿದ್ದೇನೆ ಅಂತಾನಾ?' ಸಿಟ್ಟಿನಿಂದ ಕೂಗಿದಳು. ಅವಳ ಆ ಕೂಗಿಗೆ ಅಲ್ಲಿದ್ದವರೆಲ್ಲ ಒಮ್ಮೆ ಬೆದರಿದರು.

'ನಾವು ಏನೂ ಹೇಳುತ್ತಿಲ್ಲ. ನಾವು ಎಲ್ಲ ಸಾಧ್ಯತೆಗಳನ್ನೂ ಪರಿಶೀಲಿಸುತಿದ್ದೇವೆ ಅಷ್ಟೇ...' ಎಂದ ನಾಗೇಶನ ಕಿವಿಯಲ್ಲಿ ಬ್ಯಾಂಕ್‌ಗೆ ಫೋನ್ ಮಾಡಿದ ಕಾನ್‌ಸ್ಟೆಬಲ್ ಬಂದು ಏನೋ ಉಸುರಿದ.

'ನನ್ನ ಅನುಮಾನ ನಿಜ, ಐದು ಕೋಟಿ ಹಣ ಕೃಷ್ಣನ್ ಅವರ ಅಕೌಂಟ್‌ನಿಂದ ನಿಮ್ಮ ಖಾತೆಗೆ ಜಮಾ ಆಗಿಯೇ ಇಲ್ಲ. ಅಂದರೆ ಹಣದ ವಿಚಾರ ಕೂಡ, ಕೇವಲ ನಮ್ಮನ್ನು ದಾರಿತಪ್ಪಿಸಲು ಆಡಿದ ನಾಟಕ.'

'ಸರ್, ಹಣ ಬಂದಿರುವ ಮೆಸೇಜ್ ನನಗೆ ಬಂದಿದೆ...' ರಾಕೇಶ್ ಕೂಗಿದ. ನಾಗೇಶ್ ಅವನ ಮಾತುಗಳು ಕೇಳಿಸಲೇ ಇಲ್ಲವೇನೋ ಎಂಬಂತೆ, 'ನೀವಿಬ್ಬರೂ ಸೇರಿ ಈ ನಾಟಕ ಆಡಿ ಕೃಷ್ಣನ್ ಅವರನ್ನು ಕೊಂದು ಅವರು ಆತ್ಮಹತ್ಯೆ ಮಾಡಿಕೊಂಡರೆಂದು ಬಿಂಬಿಸಲು ಪ್ರಯತ್ನ ಮಾಡಿದಿರಿ. ಚೆಸ್ ಆಟದಲ್ಲಿ ಸೋತಿದ್ದು, ಗನ್ ತೆಗೆದುಕೊಂಡು ಬಾ ಎಂದಿದ್ದು, ಬ್ಯಾಂಕ್‌ಗೆ ಹಣ ಹಾಕಿದರು ಎಂದದ್ದು ಎಲ್ಲ ನಾಟಕದ ಒಂದು ಭಾಗ. ಎಲ್ಲ ಸರಿಯಾಗಿತ್ತು ಆದರೆ, ಆ ಎರಡನೇ ಬುಲೆಟ್ ನಮಗೆ ಸಿಕ್ಕು, ನಿಮ್ಮ ಕತೆಯಲ್ಲಿ ಅನುಮಾನ ಹುಟ್ಟಿತು.'

ಅದೇ ಸಮಯಕ್ಕೆ ಕರಿ ಕೋಟನ್ನು ತೊಟ್ಟ ಒಬ್ಬ ದಡೂತಿ ವ್ಯಕ್ತಿ ಆ ಮನೆಯ ಒಳಗಡೆ ಪ್ರವೇಶಿಸಿದ. ಇನ್‌ಸ್ಪೆಕ್ಟರ್ ನಾಗೇಶ್‌ಗೆ ಅವರ್‍ಯಾರೆಂದು ತಿಳಿದಿತ್ತು. ಪ್ರಖ್ಯಾತ ಲಾಯರ್ ಶ್ರೀನಿವಾಸ ಗುಪ್ತ.

'ಏನಾಯಿತು ಇಲ್ಲಿ... ನಾಗೇಶ್... ಕೃಷ್ಣನ್‌ಗೆ ಏನಾಯಿತು?'

ನಾಗೇಶ್ ಅವರನ್ನು ಕುಳ್ಳರಿಸಿ ಸಂಕ್ಷಿಪ್ತವಾಗಿ ವಿವರಿಸಿದ.

'ಅಂದರೆ ನಾನು ಬರುವ ಮೊದಲೇ ಕೃಷ್ಣನ್‌ನ ಕೊಲೆ ಆಗಿದೆ.'

'ಏನು ಹೇಳುತ್ತಿದ್ದೀರಿ ಸರ್? ನಿಮಗೆ ತಿಳಿದಿತ್ತಾ... ಕೃಷ್ಣನ್ ಅನ್ನು ಕೊಲೆ ಮಾಡಲು ಯಾರೋ ಸಂಚು ಹೂಡಿದ್ದಾರೆ ಅಂತಾ?'

'ಎರಡು ದಿನದ ಹಿಂದೆ ಕೃಷ್ಣನ್ ನನಗೆ ಫೋನ್ ಮಾಡಿ, ತನ್ನ ಪತ್ನಿಗೆ ಹೊರಗಡೆ ಸಂಬಂಧ ಇದೆ, ತನ್ನ ಆಸ್ತಿಗೋಸ್ಕರ ಅವಳು ತನ್ನನ್ನು ಕೊಲೆ ಮಾಡಬಹುದು ಅಥವಾ ಮಾಡಿಸಬಹುದು. ಅಕಸ್ಮಾತ್ ನಾನು ಕೊಲೆಯಾಗಿ ಸತ್ತರೆ ನನ್ನ ಸಕಲ ಆಸ್ತಿಯನ್ನೂ ಮಾರಿ 'ಸೈನಿಕರ ಕಲ್ಯಾಣ ನಿಧಿಗೆ ಕೊಡುವುದು' ಎಂದು ವಿಲ್ ಬದಲಾಯಿಸಬೇಕು ಎಂದು ಹೇಳಿದ್ದರು. ಇವತ್ತು ಎರಡೂವರೆ ಹೊತ್ತಿಗೆ ಬನ್ನಿ ಒಟ್ಟಿಗೆ ಊಟ ಮಾಡಿ ವಿಲ್‌ಗೆ ಸಹಿ ಹಾಕ್ತೀನಿ ಅಂತ ಹೇಳಿದ್ದರು.'

ಇನ್‌ಸ್ಪೆಕ್ಟರ್ ನಾಗೇಶನ ಮುಖ ಅರಳಿತು. ಕೊಲೆಗೆ ಬೇಕಾದ ಉದ್ದೇಶ ತಿಳಿಯಿತು. ಶಂಕಿತರು ತನ್ನ ಎದುರಿಗೇ ಇದ್ದಾರೆ. ರಾಕೇಶ್ ಕಡೆ ತಿರುಗಿ – 'ಈಗ ಅರ್ಥ ಆಯಿತು ನಿಮ್ಮ ಪೂರ್ತಿ ನಾಟಕ. ಕೃಷ್ಣನ್ ಕೊಲೆ ಆದರೆ ನಿಮಗೆ ಯಾವ ಆಸ್ತಿ, ಹಣ ಏನೂ ಬರದು ಅಂತಾ ಗೊತ್ತಾಗಿ ನಿಮ್ಮ ಪ್ಲಾನ್ ಅನ್ನು ಸ್ವಲ್ಪ ಬದಲಾಯಿಸಿದಿರಿ. ಕೊಲೆಯನ್ನು ಆತ್ಮಹತ್ಯೆ ಅಂತಾ ಬಿಂಬಿಸಿದರೆ ಅಕಸ್ಮಾತ್ ಕೃಷ್ಣನ್ ಈ ವಿಲ್‌ಗೆ ಸಹಿ ಹಾಕಿದ್ದರೂ ನಿಮಗೇ ಆ ಆಸ್ತಿ ಬರುತ್ತಿತ್ತು. ಒಳ್ಳೆಯ